ದಿನಾಂಕಃ 06-11-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು. ಮುಂದುವರಿದ ಪಾಟೀಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ. ಎಸ್ ಆರ್ ಬಿ ವಕೀಲರಿಂದ

ತತ್ಕಾಲ್ ನಲ್ಲಿ ಪೋಡಿ ಮಾಡುವ ಸಂಧರ್ಭದಲ್ಲಿ ದಾವಾ ಸರ್ವೆ ನಂಬರ್ ಗೆ ಸಂಬಂಧಪಟ್ಟ ಯಾವ ಯಾವ ವ್ಯಕ್ತಿಗಳು ಹಾಜರಿದ್ದರು ಎಂದರೆ ಆಂಜನಪ್ಪ, ಮುನಿನಾರಾಯಣಪ್ಪ, ಮುನಿವೆಂಕಟಪ್ಪ ಇದ್ದರು. ಇನ್ನು ಯಾರಿದ್ದರು ಅಂತ ಹೆನಪಿರುವುದಿಲ್ಲ. ನೀವು ಹೇಳಿದ ಹೆಸರಿನ ವ್ಯಕ್ತಿಗಳು ದಾವೆ ಸರ್ವೆ ನಂಬರ್ ನಲ್ಲಿ ಇರುವ ಹಾಗೂ ಪಹಣಿಯಲ್ಲಿ ಇರುವ ವ್ಯಕ್ತಿಗಳು ಅಲ್ಲ ಎಂದರೆ ಸಾಕ್ಷಿಯು 7-8 ಜನ ಇರುತ್ತಾರೆ ಎಂದು ನುಡಿಯುತ್ತಾರೆ. ನಿಮ್ಮ ಜಮೀನು ಅನಿಲ್ ಎನ್ನುವವರ ಜಮೀನಿನ ಪಕ್ಕದಲ್ಲಿ ಇದೆ ಅಂತ ಹೇಳಿದ್ದು ಅವರನ್ನು ವಿಚಾರಣೆ ಮಾಡುವ ಇಂಗಿತ ಇದೆಯಾ ಎಂದರೆ ಅವರು ಎಲ್ಲಿರುತ್ತಾರೆ ಅಂತ ಗೊತ್ತಿರುವುದಿಲ್ಲ. ಹಿಂದಿನ ವಿಚಾರಣೆಯಲ್ಲಿ ನೀವು ನಿಮ್ಮದು ಒಂದು ಗುಂಟೆ ಕೃಷ್ಣಾರೆಡ್ಡಿ ರವರಿಗೆ ಸೇರಿದ 10 ಗುಂಟೆ ಜಮೀನಿನ ಆಚೆ ಇದೆ ಅಂತ ಹೇಳಿದ್ದು ಎಷ್ಟು ದೂರ ಇದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಕೃಷ್ಣಾರೆಡ್ಡಿ ರವರ 10 ಗುಂಟೆ ಜಮೀನು ದಾವಾ ಹಾಕಿದ ನಂತರ ಎಲ್ಲಿ ಇದೆ ಅಂತ ಹೇಳಿ ಹೋಗಿ ನೋಡಿರುತ್ತೀರಾ ಎಂದರೆ ನನಗೆ ಗೊತ್ತಿರುವುದಿಲ್ಲ. ಕೃಷ್ಣಾರೆಡ್ಡಿ ರವರು 10 ಗುಂಟೆ ಜಮೀನು ಕೊಂಡು ಕೊಂಡಿರುವ ವಿಷಯ ನಿಮಗೆ ಗೊತ್ತು ಎಂದರೆ ಗೊತ್ತಿರುವುದಿಲ್ಲ. ಅವರ 10 ಗುಂಟೆ ಜಮೀನನ್ನುನೀವು ನೋಡಿದ್ದು ದುರುದ್ದೇಶಪೂರ್ವಕವಾಗಿ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಹಾಜರುಪಡಿಸಿರುವ ಪೋಡಿ ದಾಖಲೆಗಳು ನೀವು ಮತ್ತು ಸರ್ವೆ ಇಲಾಖೆಯವರು ಸೃಷ್ಟಿಮಾಡಿಕೊಂಡಿರುವುದು ಎಂದರೆ ಸರಿಯಲ್ಲ. ಸರ್ವೆ ನಂ.26 ರ ಖಾತಾದಾರರಿಗೆ ನೋಟೀಸು ಕೊಟ್ಟಿರುತ್ತಾರೋ ಇಲ್ಲವೋ ಎಂದರೆ ಸಾಕ್ಷಿಯು ನೋಟೀಸು ಕೊಡಲು ಹೋದರೆ ಮನೆಯಲ್ಲಿ ಇರುವುದಿಲ್ಲ ಅಂತ ಹೇಳಿರುತ್ತಾರೆ. ಅವರು ಸಿಕ್ಕಿಲ್ಲ ಅಂತ ಹೇಳಿ ನೀವು ಮತ್ತು ಸರ್ವೆ ರವರು ಸೃಷ್ಟಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ನಿಪಿ-34 ಅನ್ನು ನೀವು ಸಷ್ಟಿ ಮಾಡಿರುವುದು ಎಂದರೆ ಸರಿಯಲ್ಲ. ನಿಪಿ-35 ಮಹಜರ್

ಸ್ಥಳದಲ್ಲಿ ಮಾಡಿರುವ ಮಹಜರ್ ಅಲ್ಲ ಎಂದರೆ ಸರಿಯಲ್ಲ. ನಿಮ್ಮ ಹೆಸರು ಬಿ. ವೆಂಕಟಶಾಮರೆಡ್ಡಿ ಎಂದರೆ ಸರಿ. ನಿಪಿ-35 ರಲ್ಲಿ ನನ್ನ ಸಹಿ ಇದೆ. ನಿಪಿ-35 ರಲ್ಲಿ ನಿಮ್ಮ ಸಹಿ ಪಕ್ಕದಲ್ಲಿ ಇರುವ ಎಲ್ಲಾ ಸಹಿಗಳನ್ನು ನೀವೇ ಸೃಷ್ಟಿ ಮಾಡಿರುವುದು ಎಂದರೆ ಸರಿಯಲ್ಲ.

ನಿಮ್ಮ ಆಸ್ತಿಯ ಸುತ್ತಲೂ ಕಲ್ಲು ಕೂಚಗಳು ಇದೆಯಾ ಎಂದರೆ ಇಲ್ಲ. ಕಲ್ಲು ಕೂಚಗಳ ಮಧ್ಯದಲ್ಲಿ ನಿಮ್ಮ ಆಸ್ತಿ ಬರುತ್ತದಾ ಬರುವುದಿಲ್ಲವಾ ಎಂದರೆ ಸಾಕ್ಷಿಯು ಪಾಯ ಹಾಕಿರುವುದು ಮಾತ್ರ ಗೊತ್ತು ಎಂದು ನುಡಿಯುತ್ತಾರೆ ನೀವು ಚೆಕ್ಕುಬಂದಿ ನೀಡಿರುವ ಸ್ಥ.ಳದಲ್ಲಿ ಯಾವುದೇ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ. ಯಾವ ಕಾರಣಕ್ಕಾಗಿ ಕೃಷ್ಣಾರೆಡ್ಡಿ ರವರ ಮೇಲೆದಾವೆ ಸಲ್ಲಿಸಿರುತ್ತೀರಾ ಎಂದರೆ ಪಾಯ ಹಾಕಿರುವ ಜಮೀನು ನಿಮ್ಮದಲ್ಲ ಅಂತ ಅಡ್ಡ ಬಂದಿರುತ್ತಾರೆ ಆ ಕಾರಣಕ್ಕೆ ದಾವೆ ಸಲ್ಲಿಸಿರುತ್ತೇನೆ. ಪಾಯ ಹಾಕುವಾಗ ಯಾಕೆ ಬಂದು ಅಡ್ಡ ಮಾಡಿರುತ್ತಾರೆ ಅಂತ ಕೇಳಿರುವುದಿಲ್ಲವಾ ಎಂದರೆ ಕೇಳಿರುತ್ತೇನೆ. ನಾವು ಜಮೀನನ್ನು ತೆಗೆದುಕೊಂಡಿರುತ್ತೇವೆ ಅಂತ ಹೇಳಿರುತ್ತಾರೆ. ದಾವೆ ಸಲ್ಲಿಸುವ ಎಷ್ಟು ದಿನಗಳ ಮುಂಚೆ ಆ ರೀತಿ ಹೇಳಿರುತ್ತಾರೆ ಎಂದರೆ 15 ದಿನಗಳ ಮುಂಚೆ. ದಾವೆ ಸಲ್ಲಿಸುವ ಎರಡು ವರ್ಷಗಳ ಹಿಂದೆ ಇದೇ ನ್ಯಾಯಾಲಯದಲ್ಲಿ ಪ್ರತಿವಾದಿ ನಿಮ್ಮ ಮೇಲೆ ದಾವೆ ಸಂಖ್ಯೆ 205/16 ರಂತೆ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ. ಅದು ಅವರ ಪರವಾಗಿ ಡಿಕ್ರಿಯಾಗಿದ್ದು ಅದರ ವಿರುದ್ದ ಅಪೀಲು ಸಲ್ಲಿಸಿರುತ್ತೇನೆ.

ನ್ಯಾಯಾಲಯದ ಬೆಳಗಿನ ಅವದಿ ಮುಗಿದ ಕಾರಣ ಪಾಟೀಸವಾಲನ್ನು ಮದ್ಯಾಹ್ನದ ಅವದಿಗೆ ಮೂಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.

ದಿನಾಂಕಃ 06-11-2023 ರಂದು ಪುನಃ ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರಿದ ಪಾಟೀಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ. ಎಸ್ ಆರ್ ಬಿ ವಕೀಲರಿಂದ

ಪ್ರತಿವಾದಿಗಳು ಅಸಲು ದಾವೆ ಸಲ್ಲಿಸುವ ಪೂರ್ವದಲ್ಲಿಯೇ ನಿಮಗೂ ಮತ್ತು ಅವರ ಮಧ್ಯೆ ತಕರಾರು ಆಗಿದ್ದು ಆ ವಿಷಯಕ್ಕೆ ಸಂಬಂಧಿಸಿದಂತೆ ದಾವೆ ಸಲ್ಲಿಸಿರುತ್ತಾರೆ ಎಂದರೆ ದೂರನ್ನು ನೀಡಿದ್ದು ನಂತರದಲ್ಲಿ ಬಂದಿರುವುದಿಲ್ಲ. 2014 ರಲ್ಲಿ ದಾವೆ ಸಲ್ಲಿಸುವ ಪೂರ್ವದಲ್ಲಿಯೇ ಠಾಣೆಯಲ್ಲಿ ದೂರು ಸಲ್ಲಿಸಿರುತ್ತಾರೆ ಎಂದರೆ ಸರಿ. ಠಾಣೆಗೆ ನಾನು ಹೋಗಿರುತ್ತೇನೆ. ಠಾಣೆಗೆ ನಿಮ್ಮ ಪರವಾಗಿ ಆಗಲಿ ಅಥವಾ ಪ್ರತಿವಾದಿ ಪರವಾಗಲೀ ದೊಡ್ಡ ಮನುಷ್ಯರು ಯಾರಾದರೂ ಬಂದಿರುತ್ತಾರಾ ಎಂದರೆ ಯಾರೂ ಬಂದಿರುವುದಿಲ್ಲ. ಸಬ್ ಇನ್ಸಪೆಕ್ಟರ್ ರವರು ಅವರ ಜಾಗದಲ್ಲಿ ಏಕೆ ಅಡ್ಡಿಪಡಿಸುತ್ತೀರಾ ಅಂತ ಹೇಳಿರುತ್ತಾರೆ ಎಂದರೆ ಸಾಕ್ಷಿಯು ನಿಮ್ಮ ಜಾಗದಲ್ಲಿ ನೀವು ಇರಿ ಅವರ ಜಾಗದಲ್ಲಿ ಅವರು ಇರುತ್ತಾರೆ ಅಂತ ಹೇಳಿರುತ್ತಾರೆ. ಠಾಣೆಯಲ್ಲಿ ಪಾಯ ಹಾಕಲು ಹೋದ ಜಾಗ ನಿಮ್ಮದು ಅಂತ ನೀವು ಹೆಳಿರುತ್ತೀರಿ ಪ್ರತಿವಾದಿಗಳು ಅವರದ್ದು ಅಂತ ಅವರು ಹೇಳಿರುತ್ತಾರೆ ಎಂದರೆ ಪ್ರತಿವಾದಿಗಳು ಠಾಣೆಯ ಬಳಿ ಬಂದಿರಲಿಲ್ಲ ಎಂದು ನುಡಿಯುತ್ತಾರೆ. ಠಾಣೆಯಲ್ಲಿ ಪಾಯ ಹಾಕಲು ಹೋದ ಜಾಗ ನಿಮ್ಮದು ಅಂತ ನೀವು ಹೆಳಿರುತ್ತೀರಿ ಪ್ರತಿವಾದಿಗಳು ಅವರದ್ದು ಅಂತ ಅವರು ಹೇಳಿರುತ್ತಾರೆ ಎಂದರೆ ಹೇಳಿರುತ್ತಾರೆ. ಅದೇ ರೀತಿ ಪೋಲಿಸ್ ಠಾಣೆಯವರು ಇಬ್ಬರಿಗೂ ದಾವಾ ಸ್ವತ್ತುಗಳು ನಿಮ್ಮದು ಆಗಿದ್ದರೆ ದಾವೆ ಹಾಕಿಕೊಳ್ಳಿ ಅಂತ ಹೇಳಿರುತ್ತಾರೆ ಎಂದರೆ ಅವರು ಏನೂ ಹೇಳಿರುವುದಿಲ್ಲ. ದಾವಾ ಸ್ವತ್ತಿಗೂ ಮತ್ತು ನಿಮಗೂ ಸಂಬಂಧ ಇರುವುದಿಲ್ಲ ಅಂತ ಕೃಷ್ಣಾರೆಡ್ಡಿ ರವರು ಹೇಳಿರುತ್ತಾರೆ ಎಂದರೆ ದೂರು ದಾಖಲಾದ ನಂತರ ಏನೂ ಹೇಳಿರುವುದಿಲ್ಲ. ಆ ದಾವೆಯಲ್ಲಿ ನೀವು ಆ ದಾವಾ ಸ್ವತ್ತು ನನಗೆ ಸಂಬಂದಿಸಿದೆ ಅಂತ ಹೇಳಿ ತಕರಾರು ಸಲ್ಲಿಸಿರುತ್ತೀರಿ ಎಂದರೆ ಸರಿ. ನಿಮ್ಮ ತಕರಾರನ್ನು ತಳ್ಳಿ ಹಾಕಿ ಡಿಕ್ರಿ

ಮಾಡಿದೆ ಎಂದರೆ ಅದಕ್ಕೆ ನಾವು ಅಪೀಲು ಹಾಕಿರುತ್ತೇವೆ. 2014 ರಲ್ಲಿ ದಾವೆ ಸಲ್ಲಿಸುವ ಪೂರ್ವ ಒಂದು ತಿಂಗಳ ಮುಂಚೆ ಠಾಣೆಯಲ್ಲಿ ದೂರು ಕೊಟ್ಟಿರುತ್ತಾರೆ. ಆಸ್ತಿಯ ಬೆಲೆ ಜಾಸ್ತಿಯಾದ ಕಾರಣ ಪ್ರತಿವಾದಿ ಆಸ್ತಿಯನ್ನು ಕಬಳಿಸುವ ದೃಷ್ಟಿಯಿಂದ ಸುಳ್ಳು ದಾವೆ ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿ ಚಿಂತಾಮಣಿ ನಗರದ ಡೆಕ್ಕನ್ ಆಸ್ಪತ್ರೆಯ ಪಕ್ಕದಲ್ಲಿ ಇರುವುದು ಎಂದರೆ ಸರಿ. ಸುತ್ತಲೂ ಮನೆಗಳು ಸೈಟುಗಳು ಆಗಿದೆ ಎಂದರೆ ಆಗಿದೆ. ಈ ಸರ್ವೆ ನಂಬರ್ ಖಾಲಿ ಇದೆ ಖಾಲಿ ಇದೆ. ಆ ಸೈಟುಗಳು 40 ಲಕ್ಷ ಬೆಲೆಬಾಳುತ್ತದೆ ಎಂದರೆ ನಾನು ಓದಿರುವುದಿಲ್ಲ. ನೀವು ಮೊದಲಿಂದಲೂ ಚಿಂತಾಮಣಿಯಲ್ಲಿ ಅಂಗಡಿಯನ್ನು ಹಾಕಿಕೊಂಡು ವಾಸ ಮಾಡುತ್ತಿರುವುದು ಎಂದರೆ ಸರಿ. ನನ್ನ ಪ್ರಕಾರ ಅಂದಾಜು ಸುಮಾರು 30 ಲಕ್ಷ ಬೆಲೆ ಬಾಳುತ್ತದೆ. 2017 ರಲ್ಲಿ ಅದರ ಬೆಲೆ 10 ಲಕ್ಷ ಇತ್ತು. ಆ ಬೌಂಡರಿ ಒಳಗೆ ನಿಮ್ಮದು ಯಾವುದೇ ಆಸ್ತಿ ಇಲ್ಲದೆ ಇದ್ದರೂ ಕೂಡ ಸುಳ್ಳು ದಾವೆ ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ. ನಿಮ್ಮ ಆಸ್ತಿಯಲ್ಲಿ ಬೇರೆಯವರು ಮನೆ ಕಟ್ಟಿಕೊಂಡಿದ್ದು ಪ್ರತಿವಾದಿಯ ಆಸ್ತಿಯಲ್ಲಿ ಬಂದು ಅವರಿಗೆ ತೊಂದರೆ ಮಾಡುತ್ತಿದ್ದೀರಿ ಎಂದರೆ ಸುಳ್ಳು

ಮರು ವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.